**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಉಡುಪಿ ಜಿಲ್ಲೆ ,ಉಡುಪಿ</u>**

<u>Com.O.S. 61/2023</u> <u>ಸಿ.ಡಬ್ಲ್ಯು: 1</u>

| | |
|---|---|
| ಸಾಕ್ಷಿದಾರರ ಹೆಸರು | ಸೋಮನಾಥ |
| ತಂದೆಯ ಹೆಸರು | ಮಲ್ಲಿಕಾರ್ಜುನ |
| ವಯಸ್ಸು | 54 ವರ್ಷ |
| ಉದ್ಯೋಗ | ಸಹಾಯಕ ಇಂಜಿನಿಯರ್,<br>ಲೋಕೋಪಯೋಗಿ ಇಲಾಖೆ, ಉಡುಪಿ |
| ವಿಳಾಸ | ಉಡುಪಿ |

ದಿನಾಂಕ: 08-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆ:</u>**

1) ಈ ದಾವೆಯಲ್ಲಿಯ ಕಮಿಷನ್ ವಾರಂಟ್ ನ್ನು ಪಡೆದ ನಾನು ತಾರೀಕು 14-08-2025 ರಂದು ದಾವಾ ಸ್ವತ್ತನ್ನು ತಪಾಸು ಮಾಡಿ, ಕಟ್ಟಡದ ಮೌಲ್ಯ ಮಾಪನ ಮಾಡಿ, ವಿವರವಾದ ವರದಿಯನ್ನು ಸಲ್ಲಿಸಿದ್ದೇನೆ. ನಾನು ಸದರಿ ತಪಾಸಣೆ ಮಾಡುವ ಮೊದಲು ಉಭಯ ಪಕ್ಷಗಾರರಿಗೆ ಕೊಟ್ಟ ನೋಟಿಸು ಮತ್ತು ಪಡೆದ ಸ್ವೀಕೃತಿಯನ್ನು ವರದಿಗಳೊಂದಿಗೆ ಸಲ್ಲಿಸಿದ್ದೇನೆ. ನಾನು ತಪಾಸು ಮಾಡಿದ ಅಂಶಗಳು, ಇಮಾರತ್ತಿನ ಅಳತೆಗಳನ್ನು, ನನ್ನ ತಪಾಸಣೆಯಲ್ಲಿ ಕಂಡುಬಂದ ಇಮಾರತ್ತಿನಲ್ಲಿ ಬಳಕೆಯಾದ ಸಾಮಾಗ್ರಿಗಳು ಮತ್ತು ಅವುಗಳ ಮೌಲ್ಯಮಾಪನಗಳನ್ನು ಒಳಗೊಂಡಂತೆ 30 ಪುಟಗಳ ವರದಿ ಇದ್ದು, ಅದರಲ್ಲಿ ಪಂಚನಾಮೆಯೂ ಸಹ ಇದೆ. ಸದರಿ ನೋಟಿಸುಗಳೊಂದಿಗಿನ ಆ ವರದಿಯನ್ನು ಈಗ ನೋಡಿ ಅದನ್ನು **ನಿಶಾನೆ ಸಿ-1** ಎಂದು ಗುರುತಿಸಿದ್ದೇನೆ.

**<u>ಪಾಟೀಸವಾಲು: ವಾದಿಯ ಪರ ಶ್ರೀ ಡಿ.ಎಸ್. ವಕೀಲರಿಂದ</u>**

1) ನನಗೆ ಈಗ ತೋರಿಸಿದ ವಾದಿಯ ತಕರಾರಿನಲ್ಲಿಯ ಅಂಶಗಳನ್ನು ನನ್ನ ವರದಿಯಲ್ಲಿ ಹೇಳಿಲ್ಲ ಎಂದರೆ, ತಕರಾರುಗಳಲ್ಲಿಯ ಬಿ, ಸಿ, ಡಿ , ಹೆಚ್ , ಜೆ, ಕೆ, ಕ್ಯೂ , ಆರ್, ಎಸ್. ಅಂಶಗಳನ್ನು ವರದಿಯಲ್ಲಿ ತೋರಿಸಿದ್ದೇನೆ. ಆದರೆ, ಎ , ಇ , ಎಫ್ , ಪಿ , ಅಂಶಗಳನ್ನು ಪ್ರತಿವಾದಿ ತಾನೇ ಕಾಮಗಾರಿ ಮಾಡಿ ಮುಗಿಸಿಕೊಂಡಿದ್ದು ಎಂದು

ಹೇಳಿದ್ದು, ಅವು ಮೇಲ್ನೋಟಕ್ಕೆ ನನಗೆ ಕಂಡುಬಾರದೇ ಇದ್ದುದರಿಂದ ಅವುಗಳ ಬಗ್ಗೆ ವಿವರಿಸಿಲ್ಲ. ವಾದಿಯ ತಕರಾರಿನ ಜಿ , ಓ, ಎಲ್, ಎಂ, ಮತ್ತು ಎನ್, ಅಂಶಗಳು ಮೇಲ್ನೋಟಕ್ಕೆ ಕಂಡು ಬಾರದೇ ಇದ್ದುದರಿಂದ ಮತ್ತು ಕಾಮಗಾರಿಯ ಎಸ್ಟೀಮೇಟ್ ಆಥವಾ ನೀಲಾ ನಕಾಶೆಯ ಮಾಹಿತಿಗಳನ್ನು ನನಗೆ ಒದಗಿಸದೇ ಇದ್ದುದರಿಂದ ಆ ಅಂಶಗಳ ಬಗ್ಗೆ ನನ್ನ ವರದಿಯಲ್ಲಿ ಹೇಳಿಲ್ಲ. ಸದರಿ ತಕರಾರಿನ ''ಐ '' ಅಂಶವನ್ನು ನಂತರ ಮಾಡಿಕೊಂಡಿರುವುದಾಗಿ ಪ್ರತಿವಾದಿ ಹೇಳಿದ್ದರಿಂದ ಅದನ್ನು ವರದಿಯಲ್ಲಿ ಹೇಳಿಲ್ಲ. ತಕರಾರಿನ "ಎಸ್'' ಅಂಶದ ತಪಾಸಣೆಯ ಸಮಯದಲ್ಲಿ ಮಳೆಗಾಲವಾಗಿದ್ದರಿಂದ ಆ ತಪಾಸಣೆಯ ಸಮಯದಲ್ಲಿ ನೀರು ಭೂಗರ್ಭದಿಂದ ಸೋರಿಕೆಯಾಗುತ್ತಿತ್ತು, ಆದ್ದರಿಂದ ಪೂರ್ಣ ಪ್ರಮಾಣದ ತಪಾಸಣೆ ಆಗಿಲ್ಲ. ಎ , ಇ , ಎಫ್, ಪಿ, ಅಂಶಗಳ ಮೌಲ್ಯಮಾಪನ ಪರಿಗಣಿಸಿದ್ದರೇ ಇಮಾರತ್ತಿನ ಮೌಲ್ಯ ಹೆಚ್ಚಾಗುತ್ತಿತ್ತು ಎಂದರೆ ನಿಜ.

**ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ ಎಂ.ಎಸ್. ವಕೀಲರಿಂದ**

2) ನಾನು ಕಟ್ಟಡವನ್ನು ತಪಾಸು ಮಾಡಿದಾಗ ಅಲ್ಲಿ ಜನ ವಾಸವಾಗಿದ್ದರು. ತಪಾಸು ಮಾಡಿದ ಕಟ್ಟಡದ ಬುನಾದಿ, ಅಡಿಪಾಯಗಳನ್ನು ಸೇರಿ ವಾದಿಯ ಪ್ರಕಾರ 8 ಸಾಲು, ಪ್ರತಿವಾದಿಯ ಪ್ರಕಾರ 7 ಸಾಲುಗಳು ಎಂದು ಹೇಳಿದ್ದರು ಎಂದರೆ, ನನಗೆ ಕಂಡಿದ್ದು 7 ಸಾಲುಗಳು. ನನ್ನ ವರದಿಯಲ್ಲಿ ನಾನು 7 ಸಾಲುಗಳನ್ನು ತೋರಿಸಿರುತ್ತೇನೆ. ಸದರಿ ಬುನಾದಿ ಮತ್ತು ಅಡಿಪಾಯಗಳ ಪೋಟೋವನ್ನು ನನ್ನ ವರದಿಯಲ್ಲಿ ಹಾಕಿದ್ದೇನೆ ಎಂದರೆ ನಿಜ. ಅದರಲ್ಲಿಯೂ ಸಹ 7 ಸಾಲುಗಳು ಕಂಡು ಬರುತ್ತವೆ ಎಂದರೆ ನಿಜ.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ